ನಿಮ್ಮೊಡನೆ

# ಮೊಬೈಲ್ 'ಮಾಯಾಬಜಾರ್'

ಮನುಷ್ಯನಿಗೆ 'ಆತ್ಮಸಂಗಾತಿ' ಎನ್ನಬಹುದಾದ ಸಾಧನ ಈ ಗಳಿಗೆಯ ಮಟ್ಟಿಗೆ ಯಾವುದಾದರೂ ಇದ್ದರೆ ಅದು ನಿಸ್ಸಂದೇಹವಾಗಿ ಮೊಬೈಲ್ ಫೋನ್. ಹಣ, ಅಂತಸ್ತು, ವಿದ್ಯೆ, ವಯಸ್ಸು, ಹಟ್ಟಿ– ಪೇಟೆ ಎಂಬ ಯಾವ ಭೇದವೂ ಇಲ್ಲದೆ ಮೊಬೈಲ್ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಸಂವಹನಕ್ಕೆ ಅಗತ್ಯವಾದ ಒಂದು ಪರಿಕರ ಎನ್ನುವ ಹಂತ ದಾಟಿ ಅನಿವಾರ್ಯ ಆಗಿದೆ. ಬದುಕನ್ನು ಆವರಿಸಿಕೊಂಡುಬಿಟ್ಟಿದೆ. ಮನೆಯಲ್ಲಿ ಮೊಬೈಲ್ ಮರೆತರೆ, ಕರೆನ್ಸಿ ಖಾಲಿಯಾದರೆ ಕೈಕಾಲು ಆಡುವುದಿಲ್ಲ. ಮಿದುಳು ಕೆಲಸ ಮಾಡುವುದಿಲ್ಲ. ಮೊಬೈಲ್ ಆ ಮಟ್ಟಿಗೆ ನಮ್ಮನ್ನು ವಶೀಕರಣಕ್ಕೆ ಒಳಪಡಿಸಿದೆ. ಓದುವಾಗ, ಬರೆಯುವಾಗ, ಉಣ್ಣುವಾಗ, ಮಲಗುವಾಗಲೂ ಜತೆಗಿರುತ್ತದೆ.

ನಾವೆಲ್ಲ ಜನಸಂಖ್ಯಾ ಸ್ಫೋಟದ ಬಗ್ಗೆ ಕೇಳಿದ್ದೇವೆ. ಈಗ ಅದನ್ನೂ ಮೀರಿದ ಮಹಾಸ್ಫೋಟವನ್ನು ಮೊಬೈಲ್ ಕ್ಷೇತ್ರದಲ್ಲಿ ಕಾಣುತ್ತಿದ್ದೇವೆ. ಈ ವರ್ಷದ ಕೊನೆಯ ವೇಳೆಗೆ ವಿಶ್ವದ ಜನಸಂಖ್ಯೆಗಿಂತ ಮೊಬೈಲ್ ಫೋನ್‌ಗಳ ಸಂಖ್ಯೆ ಹೆಚ್ಚಾಗಲಿದೆ ಎಂಬ ಅಂಶ ಇಂಟರ್‌ನ್ಯಾಷನಲ್ ಟೆಲಿಕಮ್ಯುನಿಕೇಷನ್ ಯೂನಿಯನ್ ನಡೆಸಿದ ಅಧ್ಯಯನದಿಂದ ಬೆಳಕಿಗೆ ಬಂದಿದೆ. ಈಗಾಗಲೆ 600 ಕೋಟಿ ಮೊಬೈಲ್ ಫೋನ್‌ಗಳು ಬಳಕೆಯಲ್ಲಿವೆ. ಈ ವರ್ಷ ಕಳೆಯುವ ಹೊತ್ತಿಗೆ ಈ ಸಂಖ್ಯೆ 730 ಕೋಟಿ ದಾಟಲಿದೆ ಎಂದು ಅಂದಾಜಿಸಲಾಗಿದೆ. ವಿಶ್ವದ ನೂರಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಆಯಾ ದೇಶದ ಜನಸಂಖ್ಯೆಗಿಂತ ಮೊಬೈಲ್ ಫೋನ್‌ಗಳ ಸಂಖ್ಯೆ ಈಗಾಗಲೇ ಹೆಚ್ಚಿದೆ ಎಂಬ ಅಂಕಿಅಂಶ, ಮೊಬೈಲ್ ಫೋನ್ ಮಾಡಿರುವ ಮೋಡಿ ಎಂತಹುದು ಎಂಬುದನ್ನು ತೋರುತ್ತದೆ.

ಸಂವಹನ ಕ್ಷೇತ್ರದ ಕ್ರಾಂತಿಗೆ ಮೊಬೈಲ್ ಫೋನ್ ಕೊಡುಗೆ ದೊಡ್ಡದು. ಸಿಗ್ನಲ್ ದೊರೆತರೆ ಸಾಕು, ವ್ಯಕ್ತಿ ಎಲ್ಲಿಂದ ಎಲ್ಲಿಗೆ ಬೇಕಾದರೂ ನೇರವಾಗಿ ಸಂಪರ್ಕಿಸಬಹುದು. ಭೌಗೋಳಿಕ ಅಂತರವನ್ನು ಅಷ್ಟರಮಟ್ಟಿಗೆ ಕುಗ್ಗಿಸಿದೆ. ಜಗತ್ತನ್ನು ಒಂದು ಪುಟ್ಟ ಗ್ರಾಮವನ್ನಾಗಿ ಮಾಡಿದೆ. ದೂರದಲ್ಲಿ ಇರುವವರ ಜತೆ ನೇರ ಸಂಪರ್ಕಕ್ಕೆ ಅವಕಾಶ ಕಲ್ಪಿಸಿದ ಈ ಸಾಧನವೇ ಹತ್ತಿರದಲ್ಲಿ ಇರುವವರನ್ನು ದೂರ ಮಾಡುತ್ತಿದೆ. ಅಜ್ಜಿ– ಅಜ್ಜ, ಅಣ್ಣ–ತಂಗಿಯರ ಜತೆಗೆ ಸಂವಹನವನ್ನು ಕಡಿಮೆ ಮಾಡಿದೆ ಎಂಬ ಕಳವಳವನ್ನೂ ಮೂಡಿಸಿದೆ. ದುರ್ಬಳಕೆಯ ಭೀತಿಯನ್ನೂ ಹುಟ್ಟಿಸಿದೆ.

ಮೊಬೈಲ್ ಫೋನ್ ಈಗ ಬರೀ ಸಂವಹನ ಸಾಧನವಾಗಿ ಉಳಿದಿಲ್ಲ. ಸ್ಮಾರ್ಟ್ ಫೋನ್‌ಗಳು, ಸಾಧ್ಯತೆಗಳನ್ನು ದಿನೇ ದಿನೇ ಹಿಗ್ಗಿಸುತ್ತಲೇ ಇವೆ. ಈ ವಿಚಾರದಲ್ಲಿ ಫೋನ್ ತಯಾರಿಕಾ ಕಂಪೆನಿಗಳ ನಡುವೆ ತುರುಸಿನ  ಪೈಪೋಟಿಯೇ ಇದೆ. ಮಾರುಕಟ್ಟೆ ಶರವೇಗದಲ್ಲಿ ವಿಸ್ತರಣೆಯಾಗುತ್ತಿದೆ. ಮೊಬೈಲ್ ಈಗ ಮನರಂಜನೆ ಪೆಟ್ಟಿಗೆಯಾಗಿದೆ. ಆಡುವ ವಸ್ತುವಾಗಿದೆ. ಪತ್ರ ರವಾನಿಸುವ ವಾಹಕವಾಗಿದೆ. ಬ್ಯಾಂಕ್, ಇಂಟರ್‌ನೆಟ್ ಮೊದಲಾದ ವ್ಯವಹಾರಗಳಿಗೆ ಪೂರಕವಾಗಿ ಒದಗಿಬಂದಿದೆ. ಪರ್ಸನಲ್ ಕಂಪ್ಯೂಟರ್‌ಗೆ ಪರ್ಯಾಯ ಎಂಬಂತೆ ವಿಕಸನಗೊಂಡಿದೆ. ಅದನ್ನೂ ಮೀರಿಸುವಂತೆ ಬಳಕೆಸ್ನೇಹಿಯಾಗಿದೆ. ಜತೆಜತೆಗೇ ಅಗತ್ಯದ ಎಲ್ಲೆ ಮೀರಿ ಎಚ್ಚರಿಕೆಯ ಗಂಟೆಯನ್ನೂ ಬಾರಿಸಿದೆ. ಅಶ್ಲೀಲ ದೃಶ್ಯ ವೀಕ್ಷಣೆ–ರವಾನೆಯ ಅಪಾಯ, ಶಾಲೆಗಳಲ್ಲಿ ಪಾಠ–ಪ್ರವಚನಗಳಿಗೆ ಹಾಗೂ ಮಕ್ಕಳ ಏಕಾಗ್ರತೆಗೆ ಭಂಗವಾಗುವ ಭಯ ಎದುರಾಗಿದೆ. ಚಟ ಮಾಡಿಕೊಳ್ಳದಂತೆ ಮಕ್ಕಳನ್ನು ನಿಯಂತ್ರಿಸುವುದು ಪೋಷಕರಿಗೆ ಸವಾಲಿನ ಕೆಲಸವಾಗಿದೆ. ಟಿ.ವಿ., ಕಂಪ್ಯೂಟರ್ ದಾಸರಾಗಿ ಆಟೋಟಗಳನ್ನೇ ಮರೆಯುತ್ತಿರುವ ಮಕ್ಕಳಿಗೆ ಮೊಬೈಲ್ ಫೋನ್, ಚಟವಾಗಿ ಅಂಟಿದರೆ ಹೇಗೋ ಏನೋ? ಮಕ್ಕಳನ್ನು ಮತ್ತಷ್ಟು ಸೋಮಾರಿಗಳನ್ನಾಗಿ ಮಾಡುವುದೇನೊ? ಎಂಬಿತ್ಯಾದಿ ಪ್ರಶ್ನೆಗಳು ಆತಂಕದ ರೂಪದಲ್ಲಿ ತಂದೆ–ತಾಯಂದಿರನ್ನು ಕಾಡುತ್ತಿರುವುದು ಸುಳ್ಳಲ್ಲ. ಅತಿಯಾದ ಬಳಕೆಯಿಂದ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಬಗೆಗಂತೂ ಚಿಂತೆ ಇದ್ದೇ ಇದೆ. ರೇಡಿಯೇಷನ್‌ನಿಂದ ಆಗುವ ಪರಿಣಾಮಗಳ ಕುರಿತು ನಮ್ಮಲ್ಲಿ ವ್ಯವಸ್ಥಿತವಾದ ಅಧ್ಯಯನಗಳು ನಡೆದಿಲ್ಲ. ಮೊಬೈಲ್ ಟವರ್‌ಗಳು ವಸತಿ ಪ್ರದೇಶಗಳಲ್ಲಿ ಎಗ್ಗಿಲ್ಲದೆ ತಲೆ ಎತ್ತುವುದನ್ನು ತಡೆಯಲು ಕೈಗೊಂಡಿರುವ ಕ್ರಮಗಳೂ ಸಮರ್ಪಕವಾಗಿಲ್ಲ. ಇವೆಲ್ಲಕ್ಕಿಂತ ಮಿಗಿಲಾಗಿ ತಂತ್ರಜ್ಞಾನವನ್ನು ಬಳಸುವಾಗ ಬೇಕಿರುವ ಸಂಯಮವನ್ನು ರೂಢಿಸಿಕೊಳ್ಳುವುದು ನಮ್ಮ ಕಾಲದ ತುರ್ತು ಅಗತ್ಯ.

■ ಎನ್.ಉದಯಕುಮಾರ್

ನಾವೆಲ್ಲ ಜನಸಂಖ್ಯಾ ಸ್ಫೋಟದ ಬಗ್ಗೆ ಕೇಳಿದ್ದೇವೆ. ಈಗ ಅದನ್ನೂ ಮೀರಿದ ಮಹಾಸ್ಫೋಟವನ್ನು ಮೊಬೈಲ್ ಕ್ಷೇತ್ರದಲ್ಲಿ ಕಾಣುತ್ತಿದ್ದೇವೆ. ಈ ವರ್ಷದ ಕೊನೆಯ ವೇಳೆಗೆ ವಿಶ್ವದ ಜನಸಂಖ್ಯೆಗಿಂತ ಮೊಬೈಲ್ ಫೋನ್‌ಗಳ ಸಂಖ್ಯೆ ಹೆಚ್ಚಾಗಲಿದೆ ಎಂಬ ಅಂಶ ಇಂಟರ್‌ನ್ಯಾಷನಲ್ ಟೆಲಿಕಮ್ಯುನಿಕೇಷನ್ ಯೂನಿಯನ್ ನಡೆಸಿದ ಅಧ್ಯಯನದಿಂದ ಬೆಳಕಿಗೆ ಬಂದಿದೆ.

